# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 275 (460)
ಸದಸ್ಯರ ಹೆಸರು : ಶ್ರೀ ಡಿ. ಎಸ್. ಅರುಣ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 19.08.2026
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಾಗುವಳಿ/ ಉಳುಮೆ ಚೀಟಿ ಎಂದರೇನು; ಅವುಗಳಲ್ಲಿ ಎಷ್ಟು ವಿಧ; ಯಾವುವು; ಹಂಗಾಮಿ ಮತ್ತು ಖಾಯಂ ಸಾಗುವಳಿ/ ಉಳುಮೆ ಚೀಟಿಗಳಿಗೆ ಇರುವ ವ್ಯತ್ಯಾಸ ಮತ್ತು ಕಾನೂನು ಸ್ಥಾನಮಾನದ ಬಗ್ಗೆ ವಿವರವಾದ ಮಾಹಿತಿ ನೀಡುವುದು; | ಸಾಗುವಳಿ ಚೀಟಿಯು ರೈತರಿಗೆ ಕೃಷಿ ಮಾಡಲು ಮಂಜೂರು ಮಾಡಿದ ಸರಕಾರಿ ಭೂಮಿಯ ಅಧಿಕೃತ ಹಕ್ಕುಪತ್ರವಾಗಿದೆ. ಇದನ್ನು ಬಗರ್ ಹುಕುಂ ಸಾಗುವಳಿ ಎಂದೂ ಕರೆಯುತ್ತಾರೆ. ಇದು ರೈತರಿಗೆ ಆ ಭೂಮಿಯಲ್ಲಿ ಕೃಷಿ ಮಾಡಲು ಕಾನೂನುಬದ್ಧ ಹಕ್ಕನ್ನು ನೀಡುತ್ತದೆ.<br><br>ಹಂಗಾಮಿ ಸಾಗುವಳಿ ಚೀಟಿ ಎಂದರೆ ಸರ್ಕಾರಿ ಅಥವಾ ಬಗರ್ ಹುಕುಂ ರಡಿ ಭೂಮಿಯನ್ನು ಸಾಗುವಳಿ ಮಾಡಲು ತಾತ್ಕಾಲಿಕವಾಗಿ ನೀಡುವ ಅಧಿಕೃತ ಅನುಮತಿ ಪ್ರಮಾಣಪತ್ರವಾಗಿದೆ. ಇದು ಸಂಪೂರ್ಣ ಖಾಯಂ ಹಕ್ಕುಪತ್ರ ಸಿಗುವ ಮೊದಲು ನೀಡುವ ಪ್ರಾಥಮಿಕ ಹಂತದ ದಾಖಲೆಯಾಗಿದ್ದು, ರೈತರಿಗೆ ಆ ನಿರ್ದಿಷ್ಟ ಭೂಮಿಯಲ್ಲಿ ವ್ಯವಸಾಯ ಮಾಡಲು ಅವಕಾಶ ನೀಡುತ್ತದೆ. |
| ಆ) | G.M.F (Grow More Food) ಯೋಜನೆ ಎಂದರೇನು; ಇದು ಯಾವ ಅವಧಿಯಲ್ಲಿ ಜಾರಿಯಲ್ಲಿ ಇತ್ತು; ಇದರ ಉದ್ದೇಶಗಳೇನು; ಈ ಯೋಜನೆಯಡಿ ಜಮೀನುಗಳನ್ನು ಹಂಗಾಮಿಯಾಗಿ ನೀಡುವುದು ನಿಜವೇ; (ವಿವರವಾದ ಮಾಹಿತಿ ನೀಡುವುದು); | ಹೆಚ್ಚು ಆಹಾರ ಬೆಳೆಯಿರಿ' (Grow More Food) ಅಭಿಯಾನವನ್ನು 1948 ರ ವರ್ಷದಲ್ಲಿ ಪ್ರಾರಂಭಿಸಲಾಯಿತು.<br><br>**ಉದ್ದೇಶಗಳು**<br><br>1.ದೇಶೀಯ ಬೇಡಿಕೆಯನ್ನು ಪೂರೈಸಲು ಅಕ್ಕಿ, ಗೋಧಿ |

| | | |
|---|---|---|
| | | ಮತ್ತು ಸಿರಿಧಾನ್ಯಗಳಂತಹ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು<br><br>2.ಆಹಾರ ಧಾನ್ಯಗಳ ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು.<br><br>3.ಹೆಚ್ಚಿನ ಉತ್ಪಾದಕತೆ ಮತ್ತು ಸಮರ್ಥ ಭೂ ಬಳಕೆಯತ್ತ ರೈತರನ್ನು ಮತ್ತು ಸ್ಥಳೀಯ ಆಡಳಿತವನ್ನು ಸಂಘಟಿಸುವುದು.<br><br>4.ಸುಧಾರಿತ ತಳಿ ಬೀಜಗಳು, ರಸಗೊಬ್ಬರಗಳು ಮತ್ತು ಉತ್ತಮ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಉತ್ತೇಜಿಸುವುದು.<br><br>5.ಆಹಾರ ಉತ್ಪಾದನೆಗಾಗಿ ಬೀಳು ಮತ್ತು ಬಂಜರು ಭೂಮಿ ಸೇರಿದಂತೆ ಲಭ್ಯವಿರುವ ಎಲ್ಲಾ ಭೂಮಿಯನ್ನು ಬಳಸುವುದು.<br><br>6.ಕೃಷಿ ವಿಸ್ತರಣೆಗಾಗಿ ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಸ್ಥಳೀಯ ಮಟ್ಟದ ಯೋಜನೆಯನ್ನು ಪ್ರೋತ್ಸಾಹಿಸುವುದು. |
| ಇ) | ಈ ಯೋಜನೆಯಡಿ ನೀಡಿದ ಹಂಗಾಮಿ ಸಾಗುವಳಿ/ ಉಳುಮೆ ಚೀಟಿಗಳನ್ನು ಇಲ್ಲಿಯವರೆಗೂ ಖಾಯಂ ಉಳುಮೆ ಚೀಟಿಗಳನ್ನಾಗಿ ಮಾಡದಿರಲು ಕಾರಣಗಳೇನು; ಇದರಿಂದ ಸಾವಿರಾರು ರೈತರಿಗೆ ತೊಂದರೆಯಾಗಿರುವುದು; ಸರ್ಕಾರದ ಗಮನಕ್ಕೆ ಬಂದಿದೆಯೇ: | ನಿಗದಿತ ಕಾಲಾವಧಿಯೊಳಗೆ ಸಾಗುವಳಿದಾರರು ಅರ್ಜಿ ಸಲ್ಲಿಸಬೇಕಾಗಿರುತ್ತದೆ ಆದರೆ, ಸಾಗುವಳಿದಾರರು ನಿಗದಿತ ಕಾಲಾವಧಿಯೊಳಗೆ ಅರ್ಜಿ ಸಲ್ಲಿಸಿರುವುದಿಲ್ಲ.ಆದ್ದರಿಂದ ಹಂಗಾಮಿ ಸಾಗುವಳಿ/ ಉಳುಮೆ ಚೀಟಿಗಳನ್ನು ಇಲ್ಲಿಯವರೆಗೂ ಖಾಯಂ ಉಳುಮೆ ಚೀಟಿಗಳನ್ನಾಗಿ ಮಾಡಲು ಸಾಧ್ಯವಾಗಿರವುದಿಲ್ಲ. |

| | | |
|---|---|---|
| ಈ) | ಈ ರೀತಿಯಾಗಿ R.U.C. ಜಮೀನುಗಳನ್ನು ದುರಸ್ತಿ ಪೋಡಿ ಮಾಡಬಾರದೆಂದು ಆದೇಶ ಹೊರಡಿಸಿರುವುದು ಕ್ರಮಬದ್ಧವಾಗಿದೆಯೇ; (ಮಾಹಿತಿ ಒದಗಿಸುವುದು); | ಬಗರ್ ಹುಕುಂ ತಂತ್ರಾಂಶ ಅಭಿವೃದ್ಧಿಪಡಿಸಿದ್ದು ಸದರಿ ತಂತ್ರಾಂಶದಲ್ಲಿ ನಮೂನೆ 50 ,53, 57 ಅರ್ಜಿಗಳನ್ನು ಇತ್ಯರ್ಥಪಡಿಸಲಾಗುತ್ತಿದೆ.<br>ಮುಂದುವರೆದು, ಭೂ ಮಂಜೂರಿ ಪ್ರಕರಣಗಳ ದರಖಾಸ್ತು ಪೋಡಿ ದುರಸ್ಥಿ ಸಂಬಂಧ ನಮೂನೆ 1 ರಿಂದ 5 ಮತ್ತು ನಮೂನೆ 6 ರಿಂದ 10 ಪ್ರಕ್ರಿಯೆ ಸರಳೀಕರಣ ಮಾಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಕಂಇ 156 ಎಸ್‌ಎಸ್‌ಎಂ 2024, ದಿನಾಂಕ: 25.11.2024 ರಲ್ಲಿ ಆದೇಶವನ್ನು ಹೊರಡಿಸಲಾಗಿದೆ. |
| ಉ) | ಸಾವಿರಾರು ರೈತರ ತೊಂದರೆಗಳನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಪರಿಹರಿಸಲು ಕ್ರಮಕೈಗೊಳ್ಳಲಿದೆ? | |

**ಸಂಖ್ಯೆ: ಆರ್‌ಡಿ 155 ಎಲ್‌ಜಿಕ್ಯೂ 2026**

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು,